ಕುದುರೆಯಿಂದ ವಿಜೃಂಭಣೆಯಿಂದ ನಡೆಯುತ್ತಿದ್ದ ಮೆರವಣಿಗೆ ನಿಂತುಹೋಗಿ ಭಯದ ವಾತಾವರಣ ನೆಲಸಿತ್ತು. ಕುದುರೆ ಹಿಂದೆ ಓಡಿಹೋದವರು ಕೆಲವರು ಸೀದಾ ಮಲ್ಲೂರನ್ನು ಮುಟ್ಟಿದ್ದರು. ಕೆಲವರು ಅರಕೆರೆಯನ್ನೂ ಕೆಲವರು ಹೊನ್ನಾಳಿಯನ್ನೂ ಓಡುತ್ತಾ ತೇಕುತ್ತಾ ಮುಟ್ಟಿದ್ದರು. ಕೆಲವರು ಮಾತ್ರ ಊರ ಹೊರಗಿದ್ದ ಕೊರಕಲು ಗುಂಡಿಯಲ್ಲಿ ಗುಲಾಬಿ ಬಿದ್ದಿರುವುದನ್ನು ಪತ್ತೆಹಚ್ಚಿದರು. ಗುಲಾಬಿಗೆ ಸಾಕಷ್ಟು ಏಟುಗಳು ಬಿದ್ದಿದ್ದು ಪ್ರಜ್ಞೆಯೇ ಬಂದಿರಲಿಲ್ಲ. ಅಷ್ಟೊತ್ತಿನಲ್ಲಿ ಹೊನ್ನಾಳಿಗೆ ಗಾಡಿಯಲ್ಲಿ ಗುಲಾಬಿಯನ್ನು ಸಾಗಿಸಿದರು. ಗ್ಯಾನಿಗೆ ಮಾತ್ರ ಏನೇನಾಗುತ್ತಿದೆ ಎನ್ನುವಷ್ಟರಲ್ಲಿ ಎಲ್ಲಾ ನಡೆದು ಹೋಗಿದ್ದು ಈಗ ಅವನು ಮದುವಣಿಗನ ಉಡುಪಿನ ಸಮೇತ ಗುಲಾಬಿಯಿದ್ದ ಗಾಡಿಯನ್ನು ಹಿಂಬಾಲಿಸಿ ಮೌನವಾಗಿ ಭಾರದ ಬೂಡ್ಸುಗಳನ್ನು ಎತ್ತಿ ಹಾಕುತ್ತಾ ನಡೆದ.

ಬೆಳಗಿನವರೆಗೂ ಗುಲಾಬಿಗೆ ಪ್ರಜ್ಞೆ ಬರಲಿಲ್ಲ. ಡಾಕ್ಟರು ಪದೇ ಪದೇ ನೋಡಿ ಆತಂಕದಿಂದ ಓಡಾಡುತ್ತಿದ್ದರು. ಗುಲಾಬಿ ತಂದೆತಾಯಿಗಳಿಗೆ ಡಾಕ್ಟರು ಏನು ಹೇಳುತ್ತಾರೋ ಎಂಬುದೇ ಭಯದಲ್ಲಿರಿಸಿತ್ತು. ಕೊನೆಗೊಮ್ಮೆ ಡಾಕ್ಟರು ಗುಲಾಬಿಯ ತಂದೆ ಮತ್ತು ಗ್ಯಾನಿಯನ್ನು ಕರೆಸಿ, 'ಕ್ಷಮಿಸಿ' ಎಂದರು. ಇಬ್ಬರೂ ಮೌನವಾಗಿರುವುದನ್ನು ಕಂಡು, 'ನೋಡಿ ಅವಳಿಗೆ ಬಿದ್ದಿರುವ ಹೊಡೆತ ದೊಡ್ಡದು. ಅಪ್‌ಸೆಟ್ ಆಗಿದೆ. ಹಾಗಾಗಿ ಮಗುವನ್ನು ಉಳಿಸಲಿಕ್ಕೆ ಆಗ್ಲಿಲ್ಲ ನೋಡಿ...' ಎಂದರು. ಒಮ್ಮೆಲೆ ಗ್ಯಾನಿಗೆ ಯಾವ ಮಗು, ಏನು ಮಗು ಎಂಬುದು ತೋಚದಷ್ಟು ಭಯದಿಂದ ಮಂಕು ಕವಿದುಬಿಟ್ಟಿತು. ಗುಲಾಬಿ ಅಪ್ಪನಿಗೆ ತನ್ನ ಮಗಳಿಗೆ ಮೂರು ತಿಂಗಳಾಗಿದೆ ಎಂದು ಗೊತ್ತಿದ್ದರಿಂದ ಆಘಾತಕ್ಕೆ ಬದಲು ಸ್ವಲ್ಪ ಹಾಯೆನಿಸಿತು. ಗ್ಯಾನಿ ಒಮ್ಮೆಲೆ ಕೋಪಗೊಂಡು 'ಯಾರು ಮಗು? ಎಲ್ಲಿ?' ಎಂದು ಚೀರಿದ. ಅವನ ಚೀರುವಿಕೆಯಿಂದ ಡಾಕ್ಟರಿಗೆ ಹೊರಗಿದ್ದ ಇತರರಿಗೆ ಕ್ಷಣದಲ್ಲಿ ಎಲ್ಲವೂ ಎಲ್ಲ ಘಟನೆಗಳು ಅರ್ಥವಾಗಿಹೋದವು.

ಸ್ವಲ್ಪ ದಿನ ಗುಲಾಬಿ ಕುಂಬಳೂರಲ್ಲಿ ಆರೈಕೆ ಪಡೆಯುತ್ತಾ ಇದ್ದುಬಿಟ್ಟಳು. ಗ್ಯಾನಿಗೆ ಹಾಗೂ ಎಲ್ಲರಿಗೂ ಈ ಮದುವೆ ಹಿಂದಿನ ಒಂದು ಪ್ರಕರಣ ಗೊತ್ತಾಗಿಹೋಗಿತ್ತು. ಊರವರಿಗೂ ಸಹ ತಿಳಿದಿತ್ತು. ಆದರೆ ಯಾರೂ ಸಾರ್ವಜನಿಕವಾಗಿ ಮಾತಾಡಿಕೊಳ್ಳುತ್ತಿರಲಿಲ್ಲ. ದಿನವೂ ಗ್ಯಾನಿ ಏಕಾಂಗಿಯಾಗಿ ಹೊನ್ನಾಳಿ, ಶಿವಮೊಗ್ಗ ಅಂತ ತಿರುಗಲು ತೊಡಗಿದ್ದ. ಕೊನೆಗೊಂದು ದಿನ ಸೀದಾ ಹೆಂಡತಿ ಮನೆಗೆ ಹೋಗಿ ಗುಲಾಬಿಯನ್ನು ಕರೆದುಕೊಂಡು ಬಂದೇಬಿಟ್ಟ. ಊರವರೆಲ್ಲಾ ಬಾಯಿ ತೆರೆದರು. ಗ್ಯಾನಿ ಮತ್ತು ಗುಲಾಬಿ ಊರವರ ತೆರೆದ ಬಾಯಿಗಳು ಇನ್ನಷ್ಟು ತೆರೆಯುವಂತೆ ದಿನವೂ ಬರ್ ಬರ್... ಎಂದು ಹೊನ್ನಾಳಿಗೋ ಇನ್ನೆಲ್ಲಿಗೋ ಅಲಂಕರಿಸಿಕೊಂಡು ಬಸ್ಸುಗಳನ್ನೇರಿ ಅಲೆಯತೊಡಗಿದ್ದರು. ಬಸ್ಸಿನಿಂದ ಇಳಿದು ಓಣಿಯಲ್ಲಿ ಮತ್ತು ಕೇರಿಯಲ್ಲಿ ನಡೆಯುವಾಗ ಗ್ಯಾನಿ ಕೈಯಲ್ಲೊಂದು ಬ್ಯಾಗು ಹಿಡಿದು ಭಾರದ ಬೂಡ್ಸುಗಳನ್ನು ಪಟ್‌ಪಟ್ ಎತ್ತಿಹಾಕುತ್ತಿ ಮುಂದೆಹೋಗುತ್ತಿದ್ದ. ಅವನ ಹಿಂದೆ ನಾಲ್ಕಡಿ ಅಂತರದಲ್ಲಿ ಗುಲಾಬಿ ತನ್ನ ಎತ್ತರಕ್ಕೆ ಕೊಂಚ ಬಗ್ಗಿ ರೇಷ್ಮೆ ಸೀರೆಯಿಂದ ಸರ್‌ಸರ್ ಶಬ್ದ ಹೊರಡಿಸುತ್ತಾ ಗ್ಯಾನಿಯಷ್ಟೇ ಶರವೇಗದಲ್ಲಿ ಹಿಂಬಾಲಿಸುತ್ತಿದ್ದಳು. ಇವರಿಬ್ಬರ ಈ ಅಂತರದ ಓಡಾಟ ಬರೀ ಹೊರಗೆ ಹೊರಟಾಗ ಮಾತ್ರವಾಗದೆ ಊರಲ್ಲಿಯೂ ಆಗಲು ತೊಡಗಿತು. ಇಬ್ಬರೂ ಬೆಳಿಗ್ಗೆ ಮತ್ತು ಸಂಜೆ ಬಾವಿ ನೀರಿಗೆ ಬರತೊಡಗಿದರು. ಬಾವಿಯ ಬಳಿ ಎಲ್ಲರ ಎದುರು ರಸಿಕ ಮಾತುಗಳನ್ನಾಡುತ್ತಾ ಇತರರು ಕರುಬುವಂತೆ ಮಾಡತೊಡಗಿದರು. ಗ್ಯಾನಿ ಎಗ್ಗಿಲ್ಲದೆ 'ಗುಲಾಬಿ' ಎಂದು ಎಲ್ಲರೆದುರು ಹೇಗೆ ಕರೆಯುತ್ತಿದ್ದನೋ ಅದೇ ರೀತಿಯಲ್ಲಿ ಗುಲಾಬಿ 'ಜ್ಞಾನೋಬ' ಎಂದು ಗ್ಯಾನಿಯನ್ನು ಕೂಗುತ್ತಿದಳು. ಇದು ಎಲ್ಲರಿಗೂ ಅಚ್ಚರಿ ಹುಟ್ಟಿಸಿತ್ತು.